**ಮಾಲ್ಡೀವ್ಸ್ ವಿದೇಶಾಂಗ ವ್ಯವಹಾರಗಳ ಸಚಿವರ ಭಾರತ ಭೇಟಿ (ಮೇ 25-27, 2025)**

ಮೇ 25, 2025

1. ಮಾಲ್ಡೀವ್ಸ್ ವಿದೇಶಾಂಗ ವ್ಯವಹಾರಗಳ ಸಚಿವರಾದ ಗೌರವಾನ್ವಿತ ಡಾ. ಅಬ್ದುಲ್ಲಾ ಖಲೀಲ್ ಅವರು 2025 ರ ಮೇ 25-27 ರವರೆಗೆ ಭಾರತಕ್ಕೆ ಭೇಟಿ ನೀಡಲಿದ್ದಾರೆ. 2025 ರ ಜನವರಿ ಮತ್ತು ಮಾರ್ಚ್‌ನ ಭೇಟಿಯ ನಂತರ, ಇದು 2025 ರಲ್ಲಿ ವಿದೇಶಾಂಗ ಸಚಿವ ಡಾ. ಖಲೀಲ್ ಅವರ ಮೂರನೇ ಭಾರತ ಭೇಟಿಯಾಗಿದ್ದು, ಭಾರತ ಮತ್ತು ಮಾಲ್ಡೀವ್ಸ್ ನಡುವಿನ ತೀವ್ರವಾದ ಉನ್ನತ ಮಟ್ಟದ ರಾಜಕೀಯ ವಿನಿಮಯಗಳ ಮುಂದುವರಿದ ಭೇಟಿ ಇದಾಗಿದೆ.

2. 2025 ರ ಮೇ 26 ರಂದು, ವಿದೇಶಾಂಗ ಸಚಿವ ಡಾ. ಖಲೀಲ್ ಅವರು 2 ನೇ ಭಾರತ-ಮಾಲ್ಡೀವ್ಸ್ ಹೈ ಲೆವೆಲ್ ಕೋರ್ ಗ್ರೂಪ್ (HLCG) ಸಭೆಯಲ್ಲಿ ಮಾಲ್ಡೀವ್ಸ್ ಅನ್ನು ಪ್ರತಿನಿಧಿಸಲಿದ್ದು, 2024 ರ ಅಕ್ಟೋಬರ್‌ನಲ್ಲಿ ಮಾಲ್ಡೀವ್ಸ್ ಅಧ್ಯಕ್ಷ ಡಾ. ಮೊಹಮ್ಮದ್ ಮುಯಿಜ್ಜು ಅವರ ಭಾರತ ಭೇಟಿಯ ಸಮಯದಲ್ಲಿ ಎರಡೂ ದೇಶಗಳ ನಾಯಕತ್ವಗಳು ಅಳವಡಿಸಿಕೊಂಡ ಸಮಗ್ರ ಆರ್ಥಿಕ ಮತ್ತು ಕಡಲ ಭದ್ರತಾ ಪಾಲುದಾರಿಕೆಯ ಕುರಿತಾದ ಭಾರತ-ಮಾಲ್ಡೀವ್ಸ್ ವಿಷನ್ ಡಾಕ್ಯುಮೆಂಟ್ ಅನುಷ್ಠಾನದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲಿದ್ದಾರೆ.

3. ಭೇಟಿಯ ಸಮಯದಲ್ಲಿ, ವಿದೇಶಾಂಗ ಸಚಿವ ಡಾ. ಖಲೀಲ್ ಅವರು ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಅವರೊಂದಿಗೆ ದ್ವಿಪಕ್ಷೀಯ ಚರ್ಚೆಗಳನ್ನು ಕೂಡಾ ನಡೆಸಲಿದ್ದಾರೆ.

4. ಮಾಲ್ಡೀವ್ಸ್ ಭಾರತದ ಪ್ರಮುಖ ಕಡಲ ನೆರೆಯ ರಾಷ್ಟ್ರವಾಗಿದೆ ಮತ್ತು ಭಾರತದ 'ನೆರೆಹೊರೆ ಮೊದಲು' ನೀತಿ ಮತ್ತು ವಿಷನ್ ಮಹಾಸಾಗರ್ ಅಂದರೆ, ಪ್ರದೇಶಗಳಾದ್ಯಂತ ಭದ್ರತೆ ಮತ್ತು ಬೆಳವಣಿಗೆಗಾಗಿ ಪರಸ್ಪರ ಮತ್ತು ಸಮಗ್ರ ಪ್ರಗತಿಯಲ್ಲಿ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ. ಈ ಭೇಟಿಯು ಎರಡು ದೇಶಗಳ ನಡುವೆ ಸಮಗ್ರ ಆರ್ಥಿಕ ಮತ್ತು ಕಡಲ ಭದ್ರತಾ ಪಾಲುದಾರಿಕೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ.

ನವ ದೆಹಲಿ

ಮೇ 25, 2025